ಸುದ್ದಿ ಸಂಚಯ








ರಾಮಕೃಷ್ಣ ಸ್ಟುಡೆಂಟ್ಸ್ ಹೋಂ, ಚೆನ್ನೈ (ಕೋವಿಡ್-೧೯ ಪರಿಹಾರ)

# ರಾಮಕೃಷ್ಣ ಮಹಾಸಂಘದ ಪರಿಹಾರ ಕಾರ್ಯಗಳು

೨೦೨೧ರ ಆಗಸ್ಟ್ ೧ರ ವರೆಗೆ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶಾಖಾಕೇಂದ್ರಗಳು ಭಾರತದಲ್ಲಿ ಹಾಗೂ ವಿದೇಶದಲ್ಲಿ ನಡೆಸಿದ ವಿವಿಧ ಪರಿಹಾರ ಕಾರ್ಯಗಳ ಸಂಕ್ಷಿಪ್ತ ವಿವರ ಹೀಗಿದೆ:

**೧. ಕೋವಿಡ್-೧೯ ಪರಿಹಾರ ಕಾರ್ಯ:** ಭಾರತದ ಹಾಗೂ ವಿದೇಶದ ಅನೇಕ ಕೇಂದ್ರಗಳು ಕೋವಿಡ್-೧೯ ಪರಿಹಾರ ಕಾರ್ಯವನ್ನು ಮುಂದುವರೆಸಿವೆ.





ಸೇವಾ ಪ್ರತಿಷ್ಠಾನ, ಕೋಲ್ಕತ್ತಾ

**೨. ಯಾಸ್ ಚಂಡಮಾರುತ ಪರಿಹಾರ ಕಾರ್ಯ :** ಪಶ್ಚಿಮ ಬಂಗಾಳದ **ಬೇಲ್‌ಘಾರಿಯಾ** ಕೇಂದ್ರವು ಜುಲೈ ೫ ರಿಂದ ೧೮ರ ವರೆಗೆ ಉತ್ತರ ೨೪ ಪರಗಣ, ದಕ್ಷಿಣ ೨೪ ಪರಗಣ ಹಾಗೂ ಹೌರಾ ಜಿಲ್ಲೆಗಳಲ್ಲಿ ೧೪೦೦ ಕುಟುಂಬಗಳಿಗೆ ಹಲವು ದಿನಸಿ ಪದಾರ್ಥಗಳನ್ನು ವಿತರಿಸಿದೆ. **ಮಾನಸದ್ವೀಪ** ಕೇಂದ್ರವು ಜೂನ್ ೩೦ ರಿಂದ ಜುಲೈ ೧೦ರ ವರೆಗೆ ಸಾಗರ ದ್ವೀಪಗಳಲ್ಲಿ ವಿವಿಧ ದಿನಸಿ ಪದಾರ್ಥ ಹಾಗೂ ಇನ್ನಿತರ ವಸ್ತುಗಳನ್ನು ವಿತರಿಸಿದೆ.

**೩. ನೆರೆ ಪರಿಹಾರ ಕಾರ್ಯ :** ಪಶ್ಚಿಮ ಬಂಗಾಳದ **ಗರ್ಬೆಟ್ಟಾ** ಕೇಂದ್ರವು ಜೂನ್ ೨೯ರಿಂದ ಜುಲೈ ೪ರ ವರೆಗೆ ಪಶ್ಚಿಮ ಮೇದಿನೀಪುರ ಜಿಲ್ಲೆಯ ಹಾನಿಗೊಳಗಾದ ೮೦೦ ಕುಟುಂಬಗಳಿಗೆ ದಿನಸಿ ಹಾಗೂ ಇತರ ಅಗತ್ಯ ವಸ್ತುಗಳನ್ನು ವಿತರಿಸಿದೆ.

**೪. ಸಂತ್ರಸ್ತ ಪರಿಹಾರ ಕಾರ್ಯ :** **ವೃಂದಾವನ** ಕೇಂದ್ರವು ಮೇ ೩೧ ರಂದು ವಿವಿಧ ದಿನಸಿ ಪದಾರ್ಥಗಳನ್ನು ಹಾಗೂ **ಜಲಪ್ಯಾಗುಡಿ** ಕೇಂದ್ರವು ಜುಲೈ ೧೯ ರಂದು ೭೫ ಮಹಿಳೆಯರಿಗೆ ಸೀರೆ ವಿತರಿಸಿದವು.

**೫. ಅಶಾಂತಿ ಪರಿಹಾರ ಕಾರ್ಯ :** ಜುಲೈ ತಿಂಗಳಲ್ಲಿ ದಕ್ಷಿಣ ಆಫ್ರಿಕಾದ ಹಲವು ಪ್ರದೇಶಗಳಲ್ಲಿ ವ್ಯಾಪಕವಾದ ಹಿಂಸಾಚಾರ ಹಾಗೂ ಆಸ್ತಿಪಾಸ್ತಿ ನಾಶ, ದರೋಡೆ ನಡೆದಿದ್ದು, **ಡರ್ಬನ್** ಹಾಗೂ **ಫೀನಿಕ್ಸ್** ಕೇಂದ್ರಗಳು ಈಗಾಗಲೇ ಕೋವಿಡ್-೧೯ ಸಾಂಕ್ರಾಮಿಕದಿಂದ ತತ್ತರಿಸುತ್ತಿದ್ದ ಈ ಪ್ರದೇಶಗಳಲ್ಲಿ ವಿವಿಧ ದಿನಸಿ ಹಾಗೂ ಇತರ ಪದಾರ್ಥಗಳನ್ನು ವಿತರಿಸಿವೆ.

**೬. ಚಂಡಮಾರುತ ಪರಿಹಾರ ಕಾರ್ಯ:** **ಬೇಲ್‌ಘಾರಿಯಾ** ಕೇಂದ್ರವು ಬುಲ್‌ಬುಲ್ ಚಂಡಮಾರುತದಿಂದಾಗಿ ಹಾನಿಗೊಳಗಾದ ದಕ್ಷಿಣ ೨೪ ಪರಗಣ ಜಿಲ್ಲೆಯ ಸುಂದರ್‌ಬನ್ ಪ್ರದೇಶಗಳಲ್ಲಿ ಪುನರ್ವಸತಿ ಹಾಗೂ ಪುನರ್ನಿರ್ಮಾಣ ಕಾರ್ಯಗಳನ್ನು ಮುಂದುವರಿಸಿದೆ. **ಮಾನಸದ್ವೀಪ** ಕೇಂದ್ರವು ಅಂಫಾನ್ ಚಂಡಮಾರುತದ ಪುನರ್ನಿರ್ಮಾಣ ಕಾರ್ಯಗಳನ್ನು ಮುಂದುವರೆಸಿದೆ.

ಗರ್ಬೆಟ್ಟಾ ಆಶ್ರಮ ( ನೆರೆ ಪರಿಹಾರ)




ಫಿಜಿ ವೇದಾಂತ ಸೆಂಟರ್ (ಕೋವಿಡ್ ಪರಿಹಾರ)



ಬೇಲ್‌ಘಾರಿಯಾ ಆಶ್ರಮ



Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020